## ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 128/2019**

**CW : 08 PW: 06**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 30.06.2025**

| | |
|---|---|
| ಹೆಸರು | : ಸುವರ್ಣ ಮಲಶೆಟ್ಟಿ |
| ಗಂಡನ ಹೆಸರು | : ವಿನೋದಕುಮಾರ |
| ವಯಸ್ಸು | : 33 |
| ಉದ್ಯೋಗ | : ಪಿಎಸ್.ಐ. |
| ವಾಸಸ್ಥಳ | : ಮಂಠಾಳ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು 2018 ರಿಂದ 2020 ರವರೆಗೆ ಪಿ.ಎಸ್.ಐ. ಎಂದು ಶಹಾಬಾದ ಪೋಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸಿದ್ದು ಇರುತ್ತದೆ. ದಿ: 09/02/2019 ರಂದು ನಾನು ಈ ಪ್ರಕರಣದಲ್ಲಿ 11.45 ಕ್ಕೆ ಚಾಸಾ-1 ಇವರ ಲಿಖಿತ ಫಿರ್ಯಾದಿ ದಾಖಲು ಮಾಡಿಕೊಂಡು ಅದಕ್ಕೆ ಗುನ್ನಾ ಸಂಖ್ಯೆ 8/2019 ಕಲಂ 323, 504, 498 (ಎ) ಸಹ ಕಲಂ 34 ರಡಿಯಲ್ಲಿ ಪ್ರಕರಣವು ದಾಖಲಿಸಿಕೊಂಡಿದ್ದು ಇರುತ್ತದೆ. ನಂತರದಲ್ಲಿ ಮೂಲ ಪ್ರವರದಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಾನು ಅದೇ ದಿನದಂದು ಗುನ್ನಾ ಸ್ಥಳದ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದು ಇರುತ್ತದೆ. ಸದರಿ ಪಂಚನಾಮೆಗೆ ಸ್ಥಳವನ್ನು ಚಾಸಾ-1 ಇವರು ತೋರಿಸಿರುತ್ತಾರೆ. ನಾನು ಚಾಸಾ-4, 5, 6, 7 ಇವರ ಹೇಳಿಕೆಯನ್ನು ಪಡೆದುಕೊಂಡಿದ್ದು ಇರುತ್ತದೆ.

ಮುಂದಿನ ತನಿಖೆಗಾಗಿ ಕಡತವನ್ನು ನಾನು ಚಾಸಾ-9 ಇವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿದಾರರು ನಿ.ಪಿ.1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 (ಬಿ) ಎಂದು ನಿಶಾನೆಗೊಳಿಸಲಾಯಿತು. ಸಾಕ್ಷಿದಾರರು ಪಂಚನಾಮೆಯ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು, ಸಾಕ್ಷಿದಾರರ ಸಹಿಯುನ್ನು ನಿ.ಪಿ.2 (ಎ) ಎಂದು ನಿಶಾನೆಗೊಳಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ, BSM. ವಕೀಲಲರು ಗೈರುಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**CC.No. 128/2019**
**CW : 08  PW: 06**

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**